SERVICE ABOVE SELF



2025-26

Rotary

विश्वमित्रः

# ವಿಶ್ವಮಿತ್ರ

# VISHWAMITHRA

Weekly House Bulletin of Rotary Club Shimoga, R.I. Dist. 3182

UNITE FOR GOOD

Rotary

Rtn. Francesco Arezzo
RI President 2025-26

| Rtn. K. Palaksha | Rtn. Anand R. | Rtn. Vishwas Y. | Rtn. M. Madhavachar |
|---|---|---|---|
| District Governor 2025-26 | President, Mob: 99800 93066 | Secretary, Mob : 99800 63180 | Bulletin Editor, Mob: 98862 73495 |

We meet every Wednesday at 6.45p.m. at Rotary Youth Centre, Sowlanga Road, L.B.S.Nagar, Shivamogga- 577 204

ಸಂಪುಟ – 68 ಸಂಚಿಕೆ –31 ದಿನಾಂಕ : 11–02–2026

**ದಿನಾಂಕ 11.02.2026 ರಂದು ರಾಷ್ಟ್ರಮಟ್ಟದಲ್ಲಿ ತಮ್ಮ ಛಾಪನ್ನು ಮೂಡಿಸಿರುವ, ರಾಜ್ಯ ಮಟ್ಟದಲ್ಲಿ ತಮ್ಮ ಪರಿಸರ ಪ್ರೀತಿಯನ್ನು ಸಾಮಾಜಿಕ ಕಳಕಳಿಯನ್ನು ವ್ಯಕ್ತಪಡಿಸಿರುವ ಖ್ಯಾತ ಪರಿಸರ ತಜ್ಞರೂ, ಆರ್ಥಿಕ ತಜ್ಞರೂ, ಶಿಕ್ಷಣ ತಜ್ಞರು ಮತ್ತು ನಾಟಕಕಾರರೂ ಆಗಿರುವ ಶಿವಮೊಗ್ಗೆಯವರಾದ ಪ್ರೊ. ಬಿ.ಎಂ.ಕುಮಾರ ಸ್ವಾಮಿಯವರು ನಮ್ಮ ರೋಟರಿ ವಾರದ ಸಭೆಗೆ ಮುಖ್ಯ ಅತಿಥಿಗಳಾಗಿ ಭಾಗವಹಿಸಿ, ನದಿಗಳ ಜೋಡಣೆ ವೈಜ್ಞಾನಿಕವೇ? ಎಂಬ ವಿಚಾರದಲ್ಲಿ ತಮ್ಮ ಅತ್ಯುತ್ತಮ ಉಪನ್ಯಾಸವನ್ನು ಅಂಕಿ ಅಂಶಗಳ ಸಹಿತ ಪ್ರಸ್ತುತಪಡಿಸಿದರು. ವೇದಿಕೆಯಲ್ಲಿ ಇವರೊಂದಿಗೆ ಅಧ್ಯಕ್ಷರಾದ ರೊ.ಆರ್.ಆನಂದ್ ಮತ್ತು ಕಾರ್ಯದರ್ಶಿ ರೊ.ವಿಶ್ವಾಸ್ ಎಲಬುರ್ಗಿಯವರು ಉಪಸ್ಥಿತರಿದ್ದರು. ಸಾರ್ಜೆಂಟ್ ರೊ.ಎಸ್. ಮಂಜುನಾಥ್‌ರವರು ಅಧ್ಯಕ್ಷರಿಗೆ ಕಾಲರ್ ತೊಡಿಸಿ ಸಭೆ ನಡೆಸಲು ಅನುವು ಮಾಡಿದರು.**

ಪಿಹೆಚ್‌ಎಫ್ ಶ್ರೀ ಜಿ. ಸತ್ಯನಾರಾಯಣರವರು "ಶರಣು ಮುನಿಜನತರಣ" ಎಂಬ ಗೀತೆಯನ್ನು ಸುಶ್ರಾವ್ಯವಾಗಿ ಹಾಡಿ ಪ್ರಾರ್ಥಿಸಿದರು. ರೊ. ಎನ್.ಎಸ್. ಶ್ರೀಧರ್‌ರವರು ಸರ್ವರನ್ನು ಸ್ವಾಗತಿಸಿದರು. ಕಾರ್ಯದರ್ಶಿ ರೊ.ವಿಶ್ವಾಸ್ ಎಲಬುರ್ಗಿಯವರು ಪ್ರಕಟಣೆ ಹಾಗೂ ಹುಟ್ಟು ಹಬ್ಬದ ಶುಭಾಶಯ ಕೋರಿದರು. ಅಂದಿನ ಮುಖ್ಯ ಅತಿಥಿಗಳ ಪರಿಚಯವನ್ನು ರೊ.ಎಂ.ಮಾಧವಾಚಾರ್ ಮಾಡಿದರು. ಪ್ರೊ.ಕುಮಾರ ಸ್ವಾಮಿಯವರು ಈ ನಾಡಿನ ಪ್ರಮುಖ ಅರ್ಥಶಾಸ್ತ್ರಜ್ಞರು ಮತ್ತು ಶಿಕ್ಷಣ ತಜ್ಞರಾಗಿದ್ದಾರೆ. ದೇಶೀಯ ವಿದ್ಯಾಶಾಲೆಯ ಕಾಲೇಜು ಉಪನ್ಯಾಸಕರಾಗಿ ದೀರ್ಘಕಾಲ ಸೇವೆ ಸಲ್ಲಿಸಿ, ಪ್ರಾಂಶುಪಾಲರಾಗಿ ನಿವೃತ್ತರಾಗಿದ್ದಾರೆ. ಪರಿಸರ ಮತ್ತು ಆರ್ಥಿಕ ವಿಷಯಗಳ ಕುರಿತು ವಿಶೇಷ ಕಾಳಜಿ ಹೊಂದಿರುವ ಕುಮಾರ ಸ್ವಾಮಿಯವರು, ಬಿಟಿ–ಬದನೆ ವಿರೋಧಿ ಅಭಿಯಾನದಲ್ಲಿ ಸಕ್ರಿಯವಾಗಿ ಪಾಲ್ಗೊಂಡಿದ್ದರು. 2009 ರ ನವೆಂಬರ್‌ನಲ್ಲಿ ಜಿನೀವಾದಲ್ಲಿ ನಡೆದ ಡಬ್ಲ್ಯುಟಿಓ ಸಚಿವರ ಸಮ್ಮೇಳನದಲ್ಲಿ ಸ್ವದೇಶಿ ಜಾಗರಣ ಮಂಚ್‌ನ ಪ್ರತಿನಿಧಿಯಾಗಿ ಭಾಗವಹಿಸಿದ್ದುದು ಇವರ ಹೆಗ್ಗಳಿಕೆ. ಇವರು ಅನೇಕ ರಾಜ್ಯ ಮತ್ತು ರಾಷ್ಟ್ರ ಮಟ್ಟದ ವಿಚಾರ ಸಂಕಿರಣಗಳಲ್ಲಿ ಭಾಗವಹಿಸಿ ಹಲವಾರು ಪ್ರಬಂಧಗಳನ್ನು ಮಂಡಿಸುವುದರ ಜೊತೆಗೆ ಪ್ರಚಲಿತ ವಿದ್ಯಮಾನಗಳ ಕುರಿತು ಪತ್ರಿಕೆಗಳಿಗೆ ಇವರು ಬರೆದಿರುವ ಲೇಖನಗಳು ಪ್ರಕಟಗೊಳ್ಳುತ್ತಿರುತ್ತವೆ. ಕನ್ನಡಕ್ಕೆ ಭಾಷಾಂತರಿಸಿದ ಆಂಗ್ಲ ಭಾಷೆಯ ಲೇಖನಗಳೂ ಸಹ ಪತ್ರಿಕೆಗಳಲ್ಲಿ ಪ್ರಕಟಗೊಂಡಿವೆ.







ಮುಖ್ಯ ಅತಿಥಿಗಳಾದ ಪ್ರೊ. ಬಿಎಂ. ಕುಮಾರ ಸ್ವಾಮಿಯವರು ಮಾತನಾಡುತ್ತಾ ಆರಂಭದಲ್ಲಿ ಆರ್ಥಿಕತೆಯ ಜೊತೆಗೆ ಪ್ರಮುಖ ಸಮಸ್ಯೆ ನದಿ ಜೋಡಣೆ ಸಮಸ್ಯೆಯೂ ಒಂದು ಎನ್ನುತ್ತಾ, ಭಾರತ ನೀರಿನ ಕೊರತೆ ಇರುವ ರಾಷ್ಟ್ರ. ಭಾರತದಲ್ಲಿ ಎಲ್ಲ ಕಡೆಯೂ ನೀರಿನ ಲಭ್ಯತೆ ಇಲ್ಲ. ಹಾಗಾಗಿ ಎಲ್ಲ ಕಾಲದಲ್ಲೂ ನದಿ ಜೋಡಣೆ ಯೋಚನೆ ಬಂದಿದೆ ಎಂದರು.

ಸ್ವಾತಂತ್ರ ಬಂದ ನಂತರ 1972 ರಲ್ಲಿ ನೀರಾವರಿ ಮಂತ್ರಿಯಾಗಿದ್ದ ಶ್ರೀ ಕೆ.ಎಲ್. ರಾವ್‌ರವರು ಗಂಗಾ ಕಾವೇರಿ ನದಿ ಜೋಡಣೆ ಕಾರ್ಯಯೋಜನೆಯನ್ನು ದೇಶದ ಮುಂದಿಟ್ಟಿದ್ದರು.

## ಈ ವಾರದ ಸಭೆ

**ದಿನಾಂಕ: 18–2–2026, ಬುಧವಾರ** **ಸಂಜೆ 6:45 ಗಂಟೆಗೆ**

**ಅತಿಥಿ: ಶ್ರೀ ಶೇಖರ್ ಗೌಳೇರ್**

**ಪ್ರವಾಸ ಮತ್ತು ಪರಿಸರಪ್ರಿಯರು, ಶಿವಮೊಗ್ಗ**

**ವಿಷಯ: ಪ್ರಯಾಸವಲ್ಲದ ಪ್ರವಾಸದ ಫಲಶ್ರುತಿ**

**ದಯವಿಟ್ಟು ರೋಟರಿ ಸದಸ್ಯರು ಹೆಚ್ಚಿನ ಸಂಖ್ಯೆಯಲ್ಲಿ ಆಗಮಿಸಿ**

**ಸ್ಥಳ: ರೋಟರಿ ಯುವ ಕೇಂದ್ರ,** ಸವಳಂಗ ರಸ್ತೆ, ಶಿವಮೊಗ್ಗ






ಹಾಗೆಯೇ ಭಾರತದ ಉತ್ತರ ದಕ್ಷಿಣದ ಎಲ್ಲಾ ನದಿಗಳನ್ನು ಒಟ್ಟುಗೂಡಿಸಬಹುದು ಎಂದೂ ಕೂಡ ಹೇಳಿದ್ದರು. ಇದರಿಂದ ದೇಶದೆಲ್ಲೆಡೆ ನೀರಿನ ಕೊರತೆ ನೀಗಬಹುದು ಎನ್ನುವುದು ಅವರ ಅಭಿಪ್ರಾಯವಾಗಿತ್ತು. ಇದಕ್ಕೆ ರಚಿಸಿದ ತಜ್ಞರ ಸಮಿತಿಯು ವಾಸ್ತವಿಕವಾಗಿ ಇದು ಅಸಾಧ್ಯ ಎಂದು ತಿಳಿಸಿತ್ತು. ಮೂರನೇ ಬಾರಿಗೆ 1982 ರಲ್ಲಿ Interlinking River Project – ನ್ನು National water development Agency – ಮೂಲಕ ಪ್ರಪೋಸ್ ಮಾಡಲಾಯಿತು. ಇದರಲ್ಲಿ 30 ನದಿಗಳ ಜೋಡಣೆ ಪ್ರಪೋಸ್ ಮಾಡಲಾಗಿತ್ತು. ಉತ್ತರದ ಹಿಮಾಲಯಗಳಿಂದ ಬರುವ 14 ನದಿಗಳಿಂದ ಹಾಗೂ ದಕ್ಷಿಣದ 16 ನದಿಗಳಿಗೆ ಜೋಡಣೆ ಮಾಡುವ ಕಾರ್ಯಯೋಜನೆ ಇದಾಗಿತ್ತು. ಇದರಲ್ಲಿ 3 ಲಕ್ಷಣಗಳಿದ್ದವು. 36 ಮೇಜರ್ ಡ್ಯಾಂಗಳು, ಕಟ್ಟುವಿಕೆ. 12500 ಕಿ.ಮಿ. ಕಾಲುವೆಗಳು ಮತ್ತು 94 ಕಿ.ಮಿ. ಸುರಂಗಗಳ ನಿರ್ಮಾಣದ ಅಂದಾಜು ಮಾಡಲಾಗಿತ್ತು. ಪಶ್ಚಿಮಕ್ಕೆ ಹರಿಯುವ ನದಿಗಳನ್ನು ಪೂರ್ವಕ್ಕೆ ತಿರುಗಿಸುವುದು. ಕೇರಳದ ಪಾಂಬಾ ಮತ್ತಿತರೆ ನದಿಗಳನ್ನು ಬೈಪಾಸ್ ನದಿಗೆ ಸೇರಿಸಿ ಪೂರ್ವಕ್ಕೆತಿರುಗಿಸುವುದು. ಇದರಲ್ಲಿ ಹೇಮಾವತಿ, ನೇತ್ರಾವತಿ, ಉಪನದಿಗಳಾದ ಕುಮಾರಧಾರ ಎತ್ತಿನ ಹೊಳೆ ಇವುಗಳಿಗೆ ಸೇರಿಸಿ ಬೇರೆಡೆಗೆ ಕಳುಹಿಸುವ ಯೋಜನೆಯಾಗಿತ್ತು. ಭೇಡ್ತಿ ನದಿಯನ್ನು ವರದಾ ನದಿಗೆ ಸೇರಿಸುವುದು. ತುಂಗಭದ್ರೆಯ ಉಪನದಿಗಳನ್ನು ಉತ್ತರಕರ್ನಾಟಕಕ್ಕೆ ಸೇರಿಸುವುದು ಇವೆಲ್ಲವೂ ಉತ್ತರ ಕರ್ನಾಟಕ ಪ್ರದೇಶಗಳಿಗೆ ನೀರುಣಿಸುತ್ತವೆ ಎಂಬ ಯೋಜನೆಯಾಗಿತ್ತು.

ನದಿ ನೀರು ಸಮುದ್ರಕ್ಕೆ ಸೇರುವುದು ವ್ಯರ್ಥವೆಂದು ಕೆಲವರು ಭಾವಿಸುತ್ತಾರೆ. ಆದರೆ ಪ್ರಪಂಚದ ಹಲವಾರು ನದಿಗಳು ಸಮುದ್ರ ಸೇರುತ್ತವೆ. ಸಮುದ್ರದಿಂದ ಮೋಡಗಳು ರಚನೆಯಾಗಿ, ಅದರಿಂದ ಧರೆಗಿಳಿಯುವ ಮಳೆಯೊಂದಿಗೆ ಪುನ: ನೀರು ಭೂಮಿಗೆ ಸೇರಲೇಬೇಕು ಇದೊಂದು ಚಕ್ರವಿದ್ದಂತೆ. ಅದು ಪ್ರಕೃತಿ ಸಹಜವೂ ಕೂಡ.

ಪಶ್ಚಿಮಕ್ಕೆ ಹರಿಯುವ ನದಿಯನ್ನು ಪೂರ್ವಕ್ಕೆ ತಿರುಗಿಸಿ ನೀರಿನ ಉಪಯೋಗ ಪಡೆಯುವುದೇ ಈ ಯೋಜನೆಗಳ ಉದ್ದೇಶವಾಗಿತ್ತು.

ಪ್ರತೀಯೋಜನೆಗೆ ರೂ.1/– ಹಾಕಿದರೆ ರೂ. 1.50 ಲಾಭ ಆದಾಯ ಬರುತ್ತವೆ ಎಂಬ ಯೋಜನೆ ರೂಪಿಸಿ ಈ ಯೋಜನೆಗಳಲ್ಲಿ ತೋರಿಸಲೇಬೇಕು. ಹಾಗೆಯೇ ಇಲ್ಲಿ ಅತ್ಯಂತ ಉತ್ಪ್ರೇಕ್ಷೆಯ ಯೋಜನೆಯೇ ತಯಾರಾಗುತ್ತವೆ. ಇದು ಏರುಪೇರಾದಾಗ ಯಾವ ಸರ್ಕಾರಗಳೂ ಇಂಜಿನಿಯರುಗಳಿಗೆ ಕೇಳುವುದಿಲ್ಲ. ಅವರುಗಳು ಉತ್ಪ್ರೇಕ್ಷಿತವಾಗಿ ಹೇಳುವುದೇನೆಂದರೆ, ಈ ಯೋಜನೆಯಿಂದ 3 ದಶಲಕ್ಷ ಹೆಕ್ಟೇರುಗಳಿಗೆ ನೀರುಣ್ಣಿಸಲಾಗುತ್ತದೆ. 34,000 ಮೆಗಾ ವ್ಯಾಟ್ ವಿದ್ಯುತ್ ಉತ್ಪಾದನೆಯಾಗುತ್ತದೆ. ಕಾಲುವೆಗಳ ಮೂಲಕ ಇತರೆಡೆಗೆ ಸರಕು ಸರಂಜಾಮು ತಲುಪಿಸಬಹುದು ಇತ್ಯಾದಿಗಳನ್ನು ಹೇಳಿ ರೂ.5,60,000.00 ಕೋಟಿ ಅಂದಾಜು ಮೊಬಲಗು ಲಿವರ್ ಲಿಂಕಿಂಗ್ ಪ್ರಾಜೆಕ್ಟ್‌ನಲ್ಲಿತ್ತು. ಈಗ ಈ ಯೋಜನೆಯಾಗಿ 23 ವರ್ಷಗಳೇ ಕಳೆದಿವೆ. ಈಗ ಅದರ ಬೆಲೆ ಎಷ್ಟು ಜಾಸ್ತಿಯಾಗಿದೆ ಎಂದರೆ ಸುಮಾರು 25000 ಕೋಟಿ ಹೆಚ್ಚಾಗಿದೆ. ಎತ್ತಿನ ಹೊಳೆ ಯೋಜನೆ ಮುಕ್ತಾಯವಾಯಿತು. ಅಘನಾಶಿನಿ ಯೋಜನೆಗೆ 25000 ಕೋಟಿ ಅಂದಾಜಿಸಿದೆ. ಹೀಗೆ ಕೋಟಿಗಳ ಅಂದಾಜಿನಲ್ಲಿಯೇ ಈ ಯೋಜನೆಗಳಿಗೆ ಗ್ರಹಣ ಬಡಿದಿದೆ.

ಕಳೆದ 23 ವರ್ಷಗಳಿಂದ ಯಾವ ಯೋಜನೆಗಳು ಬಂದಿವೆ ಎಂದು ಪ್ರಶ್ನಿಸಿದ ಶ್ರೀ ಕುಮಾರಸ್ವಾಮಿಯವರು. ಯಾವ ಒಂದು ಪ್ರಾಜೆಕ್ಟ್ ಸಹ ಬಂದಿಲ್ಲ. ಕಳೆದ ವರ್ಷ ಮದ್ಯಪ್ರದೇಶದಲ್ಲಿ 46200.00 ಕೋಟಿಯ ಒಂದು ಯೋಜನೆಗೆ ಚಾಲನೆ ದೊರೆತಿದೆ. 230 ಕಿ.ಮಿ. ದೂರದ ಚಾನಲ್ ಮತ್ತು 73 ಮೀಟರ್ ಎತ್ತರದ ಡ್ಯಾಂ ನಿರ್ಮಾಣ ಪ್ರಾರಂಭವಾಗಿದೆ. ಇದರ ಸಾಧಕ ಭಾದಕಗಳನ್ನು ಅವಲೋಕಿಸುವುದಾದರೆ, ಸರ್ಕಾರಕ್ಕೆ ಕಂಟ್ರಾಕ್ಟ್ ಸಾಧಕ, ಜನರಿಗೆ ಭಾದಕ. ಉತ್ತರ ಭಾರತದ ಪ್ರವಾಹ ಸಮಸ್ಯೆ ಬಗೆಹರಿಸಲು ದಕ್ಷಿಣಕ್ಕೆ ನೀರು ಹರಿವಿನ ಅಂದಾಜು ಮಾಡಲಾಗಿತ್ತು. ಉತ್ತರ ಭಾರತದಿಂದ ದಕ್ಷಿಣ ಭಾರತಕ್ಕೆ ನದಿ ನೀರು ಬರಬಹುದು. ಅದು 20 ವರ್ಷದ ಕೆಳಗೆ ಮಾಡಿದ ಯೋಜನೆ ಸರಿಯಿದ್ದಿರಬಹುದು. ಆದರೆ ಹಿಮನದಿಗಳು ಕರಗಿ ಕೆಲವು ಪ್ರದೇಶಗಳು ಅನಾಹುತಕ್ಕೀಡಾಗಬಹುದು ಎಂಬ ಉದ್ದೇಶದಿಂದ ಮಾಡಿದ ಯೋಜನೆಯಾಗಿತ್ತು. ಆದರೆ ಈಗ ಗ್ಲೋಬಲ್ ವಾರ್ಮಿಂಗ್‌ನಿಂದ ಹಿಮವೇ ಸಾಕಷ್ಟು ಕರಗಿ ಉತ್ತರದ ನದಿಗಳೂ ಕ್ಷೀಣವಾಗುತ್ತಿದೆ. ದಕ್ಷಿಣ ಭಾರತದ ಕೆಲ ನದಿಗಳು ಪಶ್ಚಿಮ ಘಟ್ಟಗಳಲ್ಲಿ ಹುಟ್ಟಿ ಹರಿದು ಬಂಗಾಳ ಕೊಲ್ಲಿ ಸೇರುತ್ತವೆ.

ಹಿಮನದಿಗಳು ಕರುಗುವ ಬಗ್ಗೆ ಹಲವಾರು ಅಂಕಿ ಅಂಶಗಳನ್ನು ಪ್ರಸ್ತಾಪಿಸಿದ ಶ್ರೀಯುತ ಕುಮಾರಸ್ವಾಮಿಗಳು, ನಮ್ಮಲ್ಲಿ ಡ್ಯಾಂಗಳ ನಿರ್ಮಾಣ, ಉದಾಹರಣೆಗೆ ಲಿಂಗನಮಕ್ಕಿ ಡ್ಯಾಂ ನಿರ್ಮಾಣದಿಂದ ಎಷ್ಟೊಂದು ಕಾಡುಗಳು ನಾಶವಾಗಿವೆ. ಎಷ್ಟೊಂದು ಜನರು ಗುಳೆ ಹೋಗುವಂತಾಯಿತು. ಅದಕ್ಕೆಲ್ಲಾ ಪರಿಹಾರ ಸರಿಯಾಗಿ ಸರ್ಕಾರ ಕೊಟ್ಟಿದೆಯಾ ಇವೆಲ್ಲವೂ ಯಕ್ಷ ಪ್ರಶ್ನೆಯಾಗಿದೆ ಎಂದರು. ಅದರಲ್ಲೂ ಕಾಡಿನಲ್ಲಿ ವಾಸಮಾಡುತ್ತಿದ್ದಂತಹ ಹರಿಜನ ಗಿರಿಜನರ ಪಾಡಂತೂ ಹೇಳತೀರದಾಗಿದ್ದು, ಸ್ವತಂತ್ರ ಬಂದಾಗಿನಿಂದ ಈ ಎಲ್ಲಾ ಯೋಜನೆಗಳಿಂದ 6 ಕೋಟಿ ಜನ ನಿರಾಶ್ರಿತರಾಗಿದ್ದಾರೆ. 20% ಜನರಿಗೆ ಏನೋ ಒಂದು ಪರಿಹಾರ ಸಿಕ್ಕಿದೆ. 80% ಜನರಿಗೆ ಪರಿಹಾರ ಸಿಕ್ಕಿಲ್ಲ. ಇದರಲ್ಲಿ ಶೇ 45% ಜನ ಕಾಡಿನ ಆದಿವಾಸಿಗಳು. ನರ್ಮದಾ ಡ್ಯಾಂ ನಿರ್ಮಾಣದಲ್ಲಿ ಸುಮಾರು 10 ಲಕ್ಷ ಜನ ನಿರಾಶ್ರಿತರಾದರು. ಇದರಲ್ಲಿ ಬಹುಪಾಲು ಆದಿವಾಸಿಗಳು. 1960 ರಲ್ಲಿ ಲಿಂಗನಮಕ್ಕಿ ಡ್ಯಾಂ ನಿರ್ಮಾಣವಾಯಿತು. ಎಷ್ಟೋ ಲಕ್ಷ ಜನ ತಮ್ಮ ಮನೆ ಮಠಗಳನ್ನು ಕಳೆದುಕೊಂಡರು. ಆದರೆ ಪರಿಹಾರ ಹೆಚ್ಚಿನ ಜನರಿಗೆ ಒದಗಿಲ್ಲ. ವಿದ್ಯುತ್ ಉತ್ಪಾದನೆ ಚೆನ್ನಾಗಾಯಿತು ಎಲ್ಲ ಸರಿಯೇ, ಆದರೆ ಜನಗಳಿಗಾದ ತೊಂದರೆ ಎಷ್ಟು ಹೇಳಲಾಗದು ಎಂದರು.

ಇವೆಲ್ಲಾ ರಾಕ್ಷಸ ಯೋಜನೆಗಳೆಂದ ಮುಖ್ಯ ಅತಿಥಿಗಳು, ಈ ಯೋಜನೆಗಳಿಂದ ಎಷ್ಟು ಕೃಷಿ ಭೂಮಿಗಳು ಅರಣ್ಯಗಳು ಮುಳುಗುತ್ತವೆ ಎಂದು ವಿಷಾದಿಸಿದ ಶ್ರೀಯುತರು, ಜನರಿಗೆ ಅನ್ನ ಹಾಕುವುದು

ಸರ್ಕಾರದ ಕರ್ತವ್ಯ ಹಾಗೂ ಜವಾಬ್ದಾರಿಯಾಗಿದೆ. ಕಣ್ಣಿನ ಪಾಪೆ ಕಾಪಾಡುವಂತೆ ಸರ್ಕಾರ ಕೃಷಿ ಭೂಮಿಯನ್ನು ಕಾಪಾಡಬೇಕು. ಅನ್ನ ಬೆಳೆಯುವ ಭೂಮಿಯನ್ನು ಜೋಪಾನ ಮಾಡಬೇಕು. ನೀತಿಯಂತೆ ದೇಶದ ಆರೋಗ್ಯ ಕಾಪಾಡಲು ದೇಶದಲ್ಲಿ ಶೇ 30% ಅರಣ್ಯವಿರಬೇಕು. ಜೀವ ವೈವಿಧ್ಯತೆಯೇ ಅರಣ್ಯದಲ್ಲಿದೆ. ಪ್ರಕೃತಿ ಸಂರಕ್ಷಣೆ ಮಾಡಬೇಕು. ಕೊನೆಯಲ್ಲಿ ಈ ಅವೈಜ್ಞಾನಿಕ ಯೋಜನೆಗಳಲ್ಲಿ ಆಗಬಹುದಾದ ನ್ಯೂನತೆ, ತೊಂದರೆಗಳನ್ನು ಸವಿಸ್ತಾರವಾಗಿ ಹೇಳಿ, ಕೊನೆಯಲ್ಲಿ ಈ ಕೆಳಕಂಡ ಅಂಶಗಳನ್ನು ಹೇಳಿದರು.

- ❖ ಸಮಾನತೆ– ಆತ ದೊಡ್ಡ ರೈತನಿರಲಿ, ಸಣ್ಣ ರೈತನಿರಲಿ ಅಲ್ಲಿ ಸಮಾನತೆ ಇರಬೇಕು.
- ❖ ಕಾರ್ಯಕ್ಷಮತೆ–ಯಾವುದೇ ಯೋಜನೆ ಇರಲಿ ಅದು ಸಮರ್ಪಕವಾಗಿ ಕೊನೆಗೊಂಡು–ನೀರಾವರಿಗೆ ಆದ್ಯತೆ ಕೊಡಬೇಕು.
- ❖ ಎಲ್ಲರ ಭಾಗವಹಿಸುವಿಕೆ – ಇಲ್ಲಿ ಎಲ್ಲರೂ ಭಾಗವಹಿಸಬೇಕು. ಅಂದರೆ ಎಲ್ಲರಿಗೂ ಯೋಜನೆಗಳ ಲಾಭ ಸಿಗುವಂತಾಗಬೇಕು.
- ❖ ಸುಸ್ಥಿರತೆಯನ್ನು ಕಾಪಾಡಬೇಕು
- ❖ ಬಾಧ್ಯಸ್ತಿಕೆ : ನಿಯಮ ಉಲ್ಲಂಘಿಸಿ ಯಾವುದೇ ಕಟ್ಟಡ ಅಥವಾ ಡ್ಯಾಂಗಳನ್ನು ಕಟ್ಟಬಾರದು.

ಬಳಕೆದಾರರು ಅಂದರೆ, ಸಾಮಾನ್ಯರು, ಕೃಷಿಕರು, ಮೀನುಗಾರರು, ನದಿ ನೀರು ಬಳಸುತ್ತಿರುವವರು, ತೀರ್ಥಕ್ಷೇತ್ರಗಳ ನಿವಾಸಿಗಳು ಇವರುಗಳು ಯಾರು ನದಿ ನೀರು ತಿರುಗಿಸಲು ಹೇಳುವುದಿಲ್ಲ. ನೀರು ಇಂಜಿನಿಯರುಗಳ ಮಾನಾಪಲಿಯಾಗಬಾರದು. ಎಲ್ಲರನ್ನು ಸಂಪರ್ಕಿಸಿ ಕಾರ್ಯಯೋಜನೆ ಮಾಡಬೇಕು ಎಂದು ಹೇಳುತ್ತಾ ನದಿ ತಿರುಗಿಸುವ ಯೋಜನೆಗಳು ಹೆಚ್ಚಾಗಿ ಅವೈಜ್ಞಾನಿಕವಾಗಿವೆ ಎಂದರು

ಬಹಳ ವಿಷಾದದಿಂದ ಹೇಳಿದ ಅವರ ಮಾತು. ಸಿಗಂದೂರಿನ ಸೇತುವೆ ಕಟ್ಟಲು 65 ವರ್ಷಗಳು ಬೇಕಾಯಿತು. ನದಿ ನೀರು ಅಂದರೆ ನಮ್ಮ ತುಂಗೆಯ ನೀರಿಗೆ ತುಂಗಾಪಾನ ಎನ್ನುವುದು ಸುಮ್ಮನೆಯಲ್ಲ. ಅದಕ್ಕೊಂದು ಆಧಾರವಿಟ್ಟುಕೊಂಡೇ ಹೇಳಿದ್ದಾರೆ. ಇದನ್ನೆಲ್ಲ ಬದಲಿಸಲು ನಿಂತರೆ ಅಲ್ಲಿನ ಜಲಚರ, ನದಿಯ ಹರಿವಿನ ಜಾಗದ ಪಾವಿತ್ರ್ಯತೆ, ಇವುಗಳಿಗೆಲ್ಲಾ ಧಕ್ಕೆಯೊದಗುತ್ತದೆ. ನಮಗೆ ರಾಕ್ಷಸ ಯೋಜನೆಗಳು ಬೇಡ ಸಣ್ಣಸಣ್ಣ ಯೋಜನೆಗಳಿಂದಲೇ ನಾವು ಮುಂದುವರಿಯಬಹುದು ಎಂದರು.

ಕೊನೆಯಲ್ಲಿ ಸಣ್ಣ ಸಣ್ಣ ಯೋಜನೆಗಳಿಂದಲೇ ನಮ್ಮ ಜನಗಳನ್ನು ಪ್ರಕೃತಿಯನ್ನು ನಾವು ಕಾಪಾಡಿಕೊಳ್ಳಬಹುದಾಗಿದೆ ಎಂದು ತಿಳಿಸುತ್ತಾ ಹಲವಾರು ಉದಾಹರಣೆಗಳನ್ನು ನೀಡಿದರು. ಇದೇ ಸಂದರ್ಭದಲ್ಲಿ ರೊ.ಆನಂದ ಕುಮಾರ್, ರೊ.ಡಿ.ಎಸ್. ನಟರಾಜ್‌ರವರುಗಳು ಕೆಲವೊಂದು ಪ್ರಶ್ನೆಗಳನ್ನು ಆಗಿರುವ ಯೋಜನೆಗಳನ್ನು ಉಲ್ಲೇಖಿಸಿದರು. ಪುನರ್‌ಗಳಿಸಬಹುದಾದ ಇಂಧನ (ರಿನಿವಬಲ್ ಎನರ್ಜಿಯಿಂದ) ಈಗ ವಿದ್ಯುತ್ ಪಡೆಯುಬಹುದಾಗಿದ್ದು ಅದನ್ನೂ ಕೂಡ ಅನುಸರಿಸಬಹುದಾಗಿದೆ ಎಂದರು.

ಅಧ್ಯಕ್ಷರಾದ ರೊ.ಆರ್.ಆನಂದರವರು ಮಾತನಾಡಿ, ಈಗ ವಿಜ್ಞಾನ ಓದಿ ಅವೈಜ್ಞಾನಿಕ ಯೋಜನೆಗಳನ್ನು ಮಾಡುತ್ತಾರೆ. ಆದರೆ ಈಗ ರಿನಿವಬಲ್ ಎನರ್ಜಿಯಿಂದ ಒಳ್ಳೆಯದಾಗುತ್ತಿದೆ. ಬಳ್ಳಾರಿ ಕಡೆಗಳಲ್ಲಿ ಎಕರೆಗಟ್ಟಲೆ ವಿಂಡ್ ಮಿಲ್‌ಗಳನ್ನು ಅಳವಡಿಸಲಾಗುತ್ತಿದೆ ಎಂದು ತಿಳಿಸಿ, ಮುಖ್ಯ ಅತಿಥಿಗಳು ಅವರು ತಮ್ಮ ಭಾಷಣದಲ್ಲಿ ಪ್ರಕೃತಿ ಮತ್ತು ಜನಗಳ ಬಗ್ಗೆ ತೋರಿದ ಕಾಳಜಿಗೆ ಅವರ ಉಪನ್ಯಾಸಕ್ಕೆ ಕೃತಜ್ಞತೆ ವ್ಯಕ್ತಪಡಿಸಿ ನೆನಪಿನ ಕಾಣಿಕೆ ನೀಡಿ ಗೌರವಿಸಿದರು. ಕೊನೆಯಲ್ಲಿ ಕಾರ್ಯದರ್ಶಿ ರೊ.ವಿಶ್ವಾಸ್ ಎಲಬುರ್ಗಿಯವರು ವಂದನಾರ್ಪಣೆ ಮಾಡಿದರು. ⌘

### ಬೇಸಿಗೆಯಲ್ಲಿ ತಪ್ಪಿಸಬೇಕಾದ ಆಹಾರಗಳು

**ರೊ. ಡಾ. ಕಾಂಚನ್ ಕುಲಕರ್ಣಿ,** ಬಿ.ಎ.ಎಂ.ಎಸ್. ಎಂ.ಡಿ. ಪಿಜಿಡಿಸಿಸಿಟಿ
**ಪಂಚಮಿ ಆಯುರ್ವೇದ ಚಿಕಿತ್ಸಾ ಕೇಂದ್ರ, ಕುವೆಂಪು ರಸ್ತೆ, ಶಿವಮೊಗ್ಗ**

- ▶ ತುಂಬಾ ಖಾರವಾದ ಆಹಾರಗಳು, ಮೆಣಸಿನಕಾಯಿ, ಗರಂ ಮಸಾಲೆ, ಚಿಲ್ಲಿಸಾಸ್, ಪ್ಯಾಕೆಟ್ ಚಟ್ನಿಗಳು.
  ಇವುಗಳನ್ನು ಸೇವಿಸುವುದರಿಂದ ಪಿತ್ತ ದೋಷ ಹೆಚ್ಚಾಗಿ ಹೊಟ್ಟೆಯಲ್ಲ ಉರಿ, ಆಸಿಡಿಟಿ ಉಂಟಾಗುತ್ತದೆ.
- ▶ ಎಣ್ಣೆ ಮತ್ತು ಕರಿದ ಆಹಾರಗಳಾದ ಪೂರಿ, ಬಜ್ಜಿ, ಪಕೋಡಾ, ಫಾಸ್ಟ್ ಫುಡ್.
  ಇವುಗಳಿಂದ ಜೀರ್ಣಶಕ್ತಿ ಕುಗ್ಗಿ ದೇಹದಲ್ಲಿ ಉಷ್ಣ ಹೆಚ್ಚುತ್ತದೆ.
- ▶ ತುಂಬಾ ಹುಳಿ ಆಹಾರಗಳಾದ, ಅತಿ ಹುಳಿ ಮೊಸರು, ಉಪ್ಪಿನಕಾಯಿ, ಹುಳಿ ಚಟ್ನಿಗಳು.
  ಇವುಗಳಿಂದ ಪಿತ್ತ ಹೆಚ್ಚಿಸಿ ಬಾಯಿಯಲ್ಲಿ ಹುಳು, ಚರ್ಮ ಸಮಸ್ಯೆ ಉಂಟಾಗಬಹುದು.
- ▶ ಹೆಚ್ಚು ಉಪ್ಪಿನ ಆಹಾರಗಳಾದ ಚಿಪ್ಸ್, ಪ್ಯಾಕೆಟ್ ಸ್ನಾಕ್ಸ್, ಅತಿಯಾದ ಉಪ್ಪು ಹಾಕಿದ ಪದಾರ್ಥ.
  ಇವುಗಳಿಂದ ನೀರಿನ ಕೊರತೆ, ಬಾಯಾರಿಕೆ ಹೆಚ್ಚಾಗುತ್ತದೆ.
- ▶ ಮಾಂಸಾಹಾರ (ವಿಶೇಷವಾಗಿ ಕೆಂಪು ಮಾಂಸ), ಮಟನ್, ಬೀಫ್.
  ಇವುಗಳಿಂದ ಜೀರ್ಣಕ್ಕೆ ಕಷ್ಟ, ದೇಹದಲ್ಲಿ ಉಷ್ಣ ಹೆಚ್ಚಳವಾಗುತ್ತದೆ.
- ▶ ಆಲ್ಕೋಹಾಲ್, ಹೆಚ್ಚು ಕಾಫಿ, ಇವುಗಳಿಂದ ದೇಹ ಒಣಗುವುದು, ನಿದ್ರಾಹೀನತೆ, ಪಿತ್ತ ವೃದ್ಧಿ.
- ▶ ತುಂಬಾ ಸಿಹಿ ಹಾಗೂ ಕೃತಕ ಸಿಹಿ ತಿನಿಸುಗಳು, ಕೇಕ್, ಪ್ಯಾಸ್ಟ್ರಿ, ಶೀತಪಾನೀಯಗಳು.
  ಇವುಗಳಿಂದ ಜೀರ್ಣದೋಷ, ತೂಕ ಹೆಚ್ಚಳವಾಗುವುದು.
- ▶ ಫ್ರಿಜ್‌ನ ತುಂಬಾ ತಣ್ಣಗಿನ ಆಹಾರಗಳು, ಐಸ್‌ಕ್ರೀಂ, ತುಂಬಾ ತಣ್ಣಗಿನ ನೀರು
  ಇವುಗಳಿಂದ ಅಗ್ನಿಮಾಂದ್ಯ (ಜೀರ್ಣಶಕ್ತಿ ಕುಗ್ಗುವುದು),

**ಆಯುರ್ವೇದ ಸಲಹೆ:** ಬೇಸಿಗೆಯಲ್ಲಿ ಪಿತ್ತ ಶಮನ ಆಹಾರ – ತಂಪು, ಲಘು, ಸಾತ್ವಿಕ ಆಹಾರಗಳನ್ನು ಆಯ್ಕೆಮಾಡಿ.

### ರೋಟರಿ ಆಶಾಕಿರಣ ಸರ್ವ ಸದಸ್ಯರ ಸಭೆ

**ಆಶಾಕಿರಣ 44ನೇ ವಾರ್ಷಿಕ ಸರ್ವಸದಸ್ಯರ ಸಭೆಯನ್ನು**
**ದಿನಾಂಕ: 04–03–2026, ಬುಧವಾರದಂದು**
**ಆಶಾಕಿರಣ ಬುದ್ಧಿಮಾಂದ್ಯ ಮಕ್ಕಳ ವಸತಿ ಶಾಲೆ**
ವಿದ್ಯಾನಗರ, ಶಿವಮೊಗ್ಗದಲ್ಲಿ
**ಬೆಳಿಗ್ಗೆ 11 ಗಂಟೆಗೆ ನಡೆಸಲಾಗುವುದು.**

**ಸಭೆಯ ಅಧ್ಯಕ್ಷತೆಯನ್ನು**
**ಡಾ. ರಜನಿ ಪೈ**
ಇವರು ವಹಿಸಲಿದ್ದಾರೆ.

ತಾವುಗಳು ಸಮಯಕ್ಕೆ ಸರಿಯಾಗಿ ಹಾಜರಿದ್ದು, ತಮ್ಮ ಅಮೂಲ್ಯ ಸಲಹೆ, ಸೂಚನೆ ನೀಡಿ, ಸಭೆಯನ್ನು ಯಶಸ್ವಿಗೊಳಿಸಿಕೊಡಬೇಕಾಗಿ ಕೋರಲಾಗಿದೆ.



## ಸಂಪಾದಕೀಯ

### ಹೀಗೊಂದು ವ್ಯಾಖ್ಯಾನ...

ಜನನಿಬಿಡ ರಸ್ತೆಯಲ್ಲಿ ಕೂತ ವೃದ್ಧ ಭಿಕ್ಷುಕ ಹುಟ್ಟಿನಿಂದಲೂ ಅಂಧ. ಹೊಟ್ಟೆ ಹೊರುವುದೇ ನಿತ್ಯದ ಪ್ರಶ್ನೆ. ಹಗಲು ಮತ್ತು ರಾತ್ರಿಗಳ ಪರಿವೆಯೇ ಇರದ ಅವನ ಬಾಳಿನಲ್ಲಿ ಶಬ್ದ ಮತ್ತು ವಾಸನೆಗಳೇ ಪ್ರಚಂಡ ಶಕ್ತಿಗಳು. ರಸ್ತೆಯಲ್ಲಿ ಒಂದು ಬೋರ್ಡನ್ನು ಇಟ್ಟುಕೊಂಡೇ ಹೊಟ್ಟೆ ಹೊರೆಯುವಿಕೆ; 'ನಾನು ಅಂಧ, ದಯವಿಟ್ಟು ನನಗೆ ಸಹಾಯಮಾಡಿ', ದಾರಿಹೋಕರೆಲ್ಲ ಒಂದಿಷ್ಟು ಕಾಸನ್ನು ಅವನ ಬಟ್ಟಲಿಗೆ ಹಾಕಿ ಸಾಗುತ್ತಿದ್ದರು. ಬಹುತೇಕರು ಅನುಕೂಲಸ್ಥರಿದ್ದರೂ ಅಸಡ್ಡೆ. ಒಂದು ಕಾಸನ್ನೂ ಹಾಕುತ್ತಿರಲಿಲ್ಲ. ಇಡೀ ದಿನ ಬಿಸಿಲು ಮಳೆ ಚಳಿಗೆ ಕೂತರೂ ಸಿಗುತ್ತಿದ್ದ ಭಿಕ್ಷೆ ತೀರಾ ನಿರಾಶಾದಾಯಕವೇ. ಮತ್ತದೇ ದಿನಚರಿ, ಮತ್ತದೇ ಜನರ ಮನೋಭಾವ.

ಈ ಬೆಳಗು ಒಂದು ವಿಸ್ಮಯವನ್ನೇ ಹುಟ್ಟು ಹಾಕಿತು. ನಾಲ್ಕಾರು ದಿನಗಳಿಂದ ಎಲ್ಲವನ್ನೂ ದೂರದ ಅಂಗಡಿಯಿಂದಲೇ ಗಮನಿಸುತ್ತಿದ್ದ ಯುವಕನೊಬ್ಬ ಆ ವೃದ್ಧನ ಬಳಿ ಬಂದು ಅವನಿಗೆ ಅರಿವಿಲ್ಲದೆಯೇ ಅದೇ ಬೋರ್ಡಿನ ಮೇಲೆ ಬರೆದಿದ್ದ, 'ನಾನು ಅಂಧ. ದಯವಿಟ್ಟು ನನಗೆ ಸಹಾಯ ಮಾಡಿ' ಎಂಬ ವಾಕ್ಯವನ್ನು ಅಳಿಸಿ, ಅದರ ಮೇಲೆ ಹೀಗೆ ಬರೆದು ಬದಲಾಯಿಸಿ ಹೋದ; ' ಈ ಲೋಕ ಅದೆಷ್ಟು ಸುಂದರವಾಗಿದೆ. ಇದನ್ನು ನೋಡುವ ಭಾಗ್ಯ ನನಗೆ ಇಲ್ಲ'.

ಈ ಬರಹವನ್ನು ಓದಿಕೊಂಡು ಸ್ವಲ್ಪ ನಿಂತು ಹೋಗುವ ಜನರೆಲ್ಲರೂ ತಮಗೆ ಆದಷ್ಟು ಹಣವನ್ನು ವೃದ್ಧನ ಬಟ್ಟಲಿಗೆ ಹಾಕುತ್ತ ಸಾಗಿದರು. ಸಂಜೆ ಒಳಗೆ ಬಟ್ಟಲು ತುಂಬಿ ನಾಣ್ಯಗಳು ಹೊರಕ್ಕೆ ಬಿದ್ದವು. ಬಟ್ಟಲ ಸುತ್ತಲೂ ಚೆಲ್ಲಿದ್ದ ನಾಣ್ಯ, ನೋಟುಗಳು ವೃದ್ಧನಿಗೆ ಅಚ್ಚರಿ. ಇದನ್ನು ಬರೆದ ಯುವಕ ಮತ್ತೆ ಅವನ ಬಳಿ ಬಂದು ಸಮಾಧಾನದ ಮಾತಾಡಿ, ತಾನು ಮಾಡಿದ ಈ ಬದಲಾವಣೆ ಕುರಿತು ಹೇಳಿದ. ಜೀವನದ ಬಗೆಗಿನ ಒಂದು ದೃಷ್ಟಿಕೋನ ಲೋಕವನ್ನು ನೋಡುವ ಕ್ರಮವನ್ನೇ ಬದಲಾಯಿಸಬಹುದು.

ತಾನು ಅಂಧನಾದರೂ ತನಗೆ ಸಹಾಯ ಮಾಡಿದ ಜನರ ಬಗ್ಗೆ ಬೇಸರವನ್ನು ವ್ಯಕ್ತಪಡಿಸಿದ ವೃದ್ಧನ ಆಲೋಚನೆಯನ್ನೇ ಬದಲಾಯಿಸಿ ಭರವಸೆಯನ್ನು ಕೊಟ್ಟ ವ್ಯಾಖ್ಯಾನವಿದು. ಲೋಕ ಸುಂದರ ಎಂಬ ಮಾತು ಓದುವ ಜನರಲ್ಲೂ ಹುಟ್ಟಿಸಿದ ಭಾವ ಮತ್ತು ಲೋಕವನ್ನು ಕಾಣದೆ ಇದ್ದರೂ ಲೋಕದ ಬಗ್ಗೆ ಆ ವೃದ್ಧನಿಗೆ ಇದ್ದ ಅಭಿಮಾನ ವಿಶ್ವಾಸಕ್ಕೆ ಜನ ಪುಳಕಗೊಂಡ ಬಗೆ ಇದು. ಈ ಲೋಕದ ಸೌಂದರ್ಯ ನಮ್ಮ ನಮ್ಮ ಪ್ರತಿಕ್ರಿಯೆಗಳನ್ನು ಅವಲಂಬಿಸಿದೆ. ವೃದ್ಧ ಕಂಡನೋ ಕಾಣನೋ ಅದು ಬೇರೆ ಮಾತು. ಲೋಕವನ್ನು ಸುಂದರಗೊಳಿಸುವಲ್ಲಿ ಸಹಾನುಭೂತಿಯ ಪಾತ್ರದ ಕುರಿತ ಎಚ್ಚರ ಇಲ್ಲಿದೆ. ಒಂದೇ ಒಂದು ವಾಕ್ಯ ಅದೆಷ್ಟು ದಾರಿಹೋಕರ ಮನದಲ್ಲಿ ಖುಷಿಯನ್ನು ತಂದಿದೆ ನೋಡಿ. ಒಂದು ಒಳ್ಳೆ ಮಾತು, ಒಂದು ಒಳ್ಳೆಯ ಪ್ರತಿಕ್ರಿಯೆ, ಒಂದು ಒಳ್ಳೆಯ ನಡೆ ಇಡೀ ಲೋಕವನ್ನು ಸುಂದರಗೊಳಿಸಬಹುದಾದರೆ ಅದಕ್ಕೂ ಏಕೆ ಹಿಂಜರಿತ.

ಡಾ. ರಾಜ್‌ಕುಮಾರ್ ಅಭಿನಯದ 'ದೇವರು ಕೊಟ್ಟ ತಂಗಿ' ಚಿತ್ರದ ಕು. ರಾ. ಸೀತಾರಾಮ ಶಾಸ್ತ್ರಿ ಅವರು ರಚಿಸಿರುವ 'ಈ ಲೋಕವೆಲ್ಲ ನೀನೇ ಇರುವ ಪೂಜಾ ಮಂದಿರ' ಹಾಡೊಮ್ಮೆ ಕೇಳಬೇಕು.

• ರೊ. ಎಂ. ಮಾಧವಾಚಾರ್




### ಮುದ್ದುರಾಮನ ಚೌಪದಿ...

**ದುಃಖವಿದೆ ಎಂದಳುತ ತಪಿಸಿದರೆ ಬದುಕೇನು?**
**ಏನಿದೆಯೋ ಅದರೊಡನೆ ಸಮನಿಪುದೆ ಬದುಕು**
**ಹೂವಿರಲಿ ಮುಳ್ಳನಿತು ಬೇಡವೆಂದರೆ ಹೇಗೆ ?**
**ತಮಬೆಳಕು ಋತು ರೀತಿ – ಮುದ್ದುರಾಮ**




### 8. Peace and Conflict Prevention/ Resolution month

- Organise model United Nations Assembly at college levels.
- Engage in reconciliation or restoring relationships.
- Organise cultural programs bringing together the citizens of different states/ countries/ religions.
- Organise poster making and slogan writing competitions on World Peace and National Integration.






*Happy Birthday Wishes*





***Renuka Srinath***
***15th Feb***

To,

*Book Post*